www.prepp.in

Prepp
Your Personal Exams Guide

# Question Paper-1

9213754

Maximum Marks : 50
ಗರಿಷ್ಠ ಅಂಕಗಳು : 50

Time : 90 Minutes
ಸಮಯ : 90 ನಿಮಿಷಗಳು

1. Write an essay in not more than 600 words on any one of the following topics : **20**

ಕೆಳಕಂಡ ಯಾವುದಾದರೂ ಒಂದು ವಿಷಯದ ಬಗ್ಗೆ 600 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.

(1) The relationship between environmental and demographic problems.

ಪರಿಸರ ಮತ್ತು ಜನಸಂಖ್ಯೆಗೆ ಸಂಬಂಧಿಸಿದ ಸಮಸ್ಯೆಗಳ ನಡುವೆ ಇರುವ ಸಂಬಂಧವೇನು ?

(2) The composition and cosmopolitan culture of India.

ಭಾರತದ ಸಂಯೋಜನೆ ಮತ್ತು ಸಂಯೋಜಿತ (ಸಮದರ್ಶಿ) ಸಂಸ್ಕೃತಿ.

(3) Educational crisis during pandemic period.

ಪಿಡುಗು (ಮಹಾಮಾರಿ) ಸಮಯದಲ್ಲಿ ವಿದ್ಯಾಭ್ಯಾಸಕ್ಕೆ ಉಂಟಾದ ವಿಷಮಸ್ಥಿತಿ (ಶೈಕ್ಷಣಿಕ ಬಿಕ್ಕಟ್ಟು).

(4) Significance of science and technology in policing.

ಕಾರ್ಯಕುಶಲತೆ ಅಥವಾ ರಾಜ್ಯಭಾರ ಕೌಶಲ್ಯದಲ್ಲಿ (ಪೋಲಿಸಿಂಗ್) ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವ.

(5) South Asia is a burning cauldron, Examine.

ದಕ್ಷಿಣ ಏಷ್ಯಾ ಒಂದು ಸುಡುತ್ತಿರುವ ದೊಡ್ಡ ಕಡಾಯಿ. ಪರೀಕ್ಷಿಸಿ.

Prepp+ Subscription
Only ~~(₹999)~~ ₹249/year
500+ Exams | 1 Year Full Access | 50,000+ Mock tests | 10,000+ Pyp's
Unlock Your Success Today!
LIMITED TIME OFFER

www.prepp.in

Prepp
Your Personal Exams Guide

**II. Translate the following paragraph from Kannada to English :** 10

ಈ ಕೆಳಕಂಡ ಪ್ಯಾರಾವನ್ನು ಕನ್ನಡದಿಂದ ಇಂಗ್ಲೀಷ್ ಭಾಷೆಗೆ ಅನುವಾದಿಸಿ.

ಮನುಷ್ಯರಿಗೆ ಅಥವಾ ಇತರ ಜೀವಿಗಳಿಗೆ ಹಾನಿ ಅಥವಾ ತೊಂದರೆಯುಂಟು ಮಾಡುವ ಸ್ವಾಭಾವಿಕ ಪರಿಸರಕ್ಕೆ ಹಾನಿಯನ್ನುಂಟು ಮಾಡುವ ರಾಸಾಯನಿಕಗಳು, ಸೂಕ್ಷ್ಮ ಕಣಗಳ ವಸ್ತು ಅಥವಾ ಜೈವಿಕ ಸಾಮಗ್ರಿಗಳು ಭೂಮಿಯ ವಾತಾವರಣಕ್ಕೆ ಸೇರಿಕೊಳ್ಳುವುದಕ್ಕೆ ವಾಯುಮಾಲಿನ್ಯ ಎಂದು ಹೆಸರು.

ವಾತಾವರಣವು ಒಂದು ಸಂಕೀರ್ಣ ಚಲನಶೀಲ ಸ್ವಾಭಾವಿಕ ಅನಿಲರೂಪದ ವ್ಯವಸ್ಥೆಯಾಗಿದ್ದು, ಭೂಮಿಯ ಮೇಲಿನ ಜೀವಜಾಲ ಪೂರಕವಾಗಿ ನಿಲ್ಲಲು ಅದು ಅತ್ಯಂತ ಅಗತ್ಯವಾಗಿರುತ್ತದೆ.

ವಾಯು ಮಾಲಿನ್ಯದ ಕಾರಣದಿಂದ ಉಂಟಾಗುವ ವಾಯುಮಂಡಲ ಓಝೋನ್ ಬರಿದಾಗುವಿಕೆಯು ಮಾನವನ ಆರೋಗ್ಯವಷ್ಟೇ ಅಲ್ಲದೇ ಭೂಮಿಯ ಪರಿಸರ ವ್ಯವಸ್ಥೆಗಳು ಒಂದು ಅಪಾಯವಾಗಿ ಪರಿಣಮಿಸುತ್ತದೆ ಎಂಬುದನ್ನು ಬಹಳ ಹಿಂದೆಯೇ ಗುರುತಿಸಲಾಗಿದೆ.

ವಾಹನಗಳಲ್ಲಿ, ವಿದ್ಯುತ್ ಸ್ಥಾವರಗಳಲ್ಲಿ ಹಾಗೂ ಬಗೆಬಗೆಯ ಕೈಗಾರಿಕಾ ಪ್ರಕ್ರಿಯೆಗಳಲ್ಲಿ ಪಳೆಯುಳಿಕೆ ಇಂಧನಗಳನ್ನು ಉರಿಸುವುದು ಇವೇ ಮೊದಲಾದ ಮಾನವ ಚಟುವಟಿಕೆಗಳೂ ಸಹ ಗಣನೀಯ ಪ್ರಮಾಣದಲ್ಲಿ ಧೂಳನ್ನು ಉತ್ಪತ್ತಿ ಮಾಡುತ್ತವೆ. ಇಡೀ ಭೂಮಂಡಲವನ್ನೇ ಸರಾಸರಿಯಾಗಿ ಪರಿಗಣಿಸುವುದಾದರೆ ಮಾನವ ಚಟುವಟಿಕೆಗಳ ಕಾರಣದಿಂದ ಸೃಷ್ಟಿಸಲ್ಪಟ್ಟ ಮಾನವಜನ್ಯ ಧೂಳು ಪ್ರಸ್ತುತ ನಮ್ಮ ವಾತಾವರಣದಲ್ಲಿರುವ ಧೂಳಿನ ಒಟ್ಟು ಪ್ರಮಾಣದ ಶೇಕಡಾ 10ರಷ್ಟು ಭಾಗವನ್ನು ಆಕ್ರಮಿಸಿ ಕೊಳ್ಳುತ್ತವೆ. ವಾಯುವಿನಲ್ಲಿನ ಸೂಕ್ಷ್ಮ ಕಣಗಳಲ್ಲಿನ ಮಟ್ಟವು ಹೆಚ್ಚುತ್ತಿರುವುದು ಹೃದ್ರೋಗ, ಶ್ವಾಸಕೋಶದ ಕಾರ್ಯಕ್ಷಮತೆಯಲ್ಲಿ ವ್ಯತ್ಯಾಸವುಂಟಾಗುವುದು ಮತ್ತು ಶ್ವಾಸಕೋಶದ ಕ್ಯಾನ್ಸರ್‌ನಂತಹ ಅಪಾಯಗಳಿಗೆ ಕಾರಣವಾಗುತ್ತದೆ.

Prepp+ Subscription
Only (₹999) ₹249/year
500+ Exams | 1 Year Full Access | 50,000+ Mock tests | 10,000+ Pyp's
Unlock Your Success Today!
LIMITED TIME OFFER

www.prepp.in

Prepp
Your Personal Exams Guide

**III. Translate the following gist from English to Kannada :** 10

ಈ ಕೆಳಕಂಡ ಖಂಡಿಕೆಯನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿ.

Ground water has emerged as the primary water source and poverty reduction tool in India's rural areas. On account of its near universal availability, dependability and low capital cost, it is the most preferred source of water to meet the requirements of various user sectors in India. Ground water has made significant contributions to the growth of India's Economy and has been an important catalyst for its socio economic development. Its importance as a precious natural resource in the Indian context can be gauged from the fact that more than 85 percent of India's rural domestic water requirements, 50 percent of its urban water requirements and more than 50 percent of its irrigation requirements are being met from ground water resources. The increasing dependence on ground water as a reliable source of water has resulted in its large-scale and often indiscriminate development in various parts of the country, without due regard to the recharging capacities of aquifers and other environmental factors.

The unplanned and non-scientific development of ground water resources, mostly driven by individual initiatives has led to an increasing stress on the available resources. The adverse impacts can be observed in the form of long-term decline of ground water levels, de-saturation of aquifer zones, increased energy consumption for lifting water from progressively deeper levels and quality deterioration due to saline water intrusion in coastal areas in different parts of the country. On the other hand, there are areas in the country, where ground water development is still at low-key in spite of the availability of sufficient resources, similarly the canal command areas

Prepp+ Subscription
Only (₹999) ₹249/year
500+ Exams | 1 Year Full Access | 50,000+ Mock tests | 10,000+ Pyp's
Unlock Your Success Today!
LIMITED TIME OFFER

www.prepp.in

Prepp
Your Personal Exams Guide

Write a summary (Precis) of the Kannada passage given below by reducing to 1/3 of the size and providing a suitable title. 10

ಈ ಕೆಳಗಿನ ಕನ್ನಡ ಲೇಖನವನ್ನು 1/3 ರಷ್ಟಕ್ಕೆ ಇಳಿಸಿ ಸಾರಾಂಶವನ್ನು ಬರೆಯಿರಿ ಮತ್ತು ಅದಕ್ಕೊಂದು ಶೀರ್ಷಿಕೆಯನ್ನು ಕೊಡಿ.

ಪ್ರಪಂಚದಲ್ಲಿ ಎಲ್ಲಕ್ಕಿಂತ ಅಮೂಲ್ಯವಾದದ್ದು ಸ್ವಾತಂತ್ರ್ಯ. ಸಹಜವಾಗಿಯೇ ಭಾರತ ಈ ಮಹಾನ್ ತತ್ವಕ್ಕೆ, ಅದರ ಸಾಧನೆಗೆ ಕೊಟ್ಟಷ್ಟು ಮಹತ್ವ ಮತ್ತಾವುದೇ ವಿಷಯಕ್ಕೂ ಕೊಡಲಿಲ್ಲ.

ಸ್ವಾತಂತ್ರ್ಯ ಪದದ ಅರ್ಥವೇ ಹಾಗಿದೆ, ಯಾರದೇ ಅಂಕೆಯಲ್ಲಿ ಇರದೇ ಸ್ವಚ್ಛಂದವಾಗಿ ಬದುಕುವ ಅದ್ಭುತ ಸ್ಥಿತಿ. ತನ್ನ ನಾಗರಿಕತೆಯ ಉದ್ದಕ್ಕೂ ಭಾರತ ತನ್ನ ಶಕ್ತಿಯನ್ನು ವ್ಯಯಿಸಿದ್ದೇ ಸ್ವತಂತ್ರನಾಗುವುದು ಹೇಗೆ ಎಂಬ ವಿಷಯಕ್ಕೆ. ಜಗತ್ತಿನ ಮತ್ತಾವ ದೇಶವೂ ಸ್ವಾತಂತ್ರ್ಯ ಎನ್ನುವ ಪದಕ್ಕೆ ಇಷ್ಟು ವಿಶಾಲ ಅರ್ಥ ನೀಡಿಲ್ಲ. ಈ ಪದದ ಅರ್ಥ ವ್ಯಾಪ್ತಿಯನ್ನು ಜಗತ್ತಿಗೆ ತಿಳಿಸಿಕೊಟ್ಟಿರುವುದೇ ಭಾರತ.

ಆದರೆ ಪ್ರಸ್ತುತ ವಿದ್ಯಮಾನಗಳನ್ನು ಗಮನಿಸಿದಾಗ ಹಲವು ಚಿಂತಾಜನಕ ವಿಷಯಗಳು ಹೊರಹೊಮ್ಮುತ್ತಿವೆ. ಭಾರತದ ಪ್ರಜೆಗಳಿಗೆ ಸಂವಿಧಾನದ ಮೂಲಭೂತ ಹಕ್ಕುಗಳ ಸ್ವರೂಪದಲ್ಲಿ ದೊರೆತ ಸ್ವಾತಂತ್ರ್ಯವನ್ನು ಇಂದಿನ ನಮ್ಮ ಪ್ರಜ್ಞಾವಂತ ಪ್ರಜೆಗಳು ದುರ್ಬಳಕೆ ಮಾಡುತ್ತಿರುವುದು ಕಂಡುಬರುತ್ತಿದೆ. ಸಂವಿಧಾನದಿಂದ ದೊರೆತ ಸ್ವಾತಂತ್ರ್ಯವನ್ನು, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಬಲಗೊಳಿಸುವ ನಿಟ್ಟಿನಲ್ಲಿ ಸದುಪಯೋಗ ಪಡೆಯಬೇಕಾಗಿದೆ. ಭಾರತದ ಬಗ್ಗೆ ನಿಖರ ಜ್ಞಾನ, ಭಾರತದ ಪ್ರಾಬಲ್ಯ ಹಾಗೂ ದೌರ್ಬಲ್ಯಗಳನ್ನು ಕರಾರುವಕ್ಕಾಗಿ ಮತ್ತು ವೈಜ್ಞಾನಿಕ ವಿವರಗಳೊಂದಿಗೆ ಭಾರತೀಯ ಪ್ರಜಾ ಸಮುದಾಯಕ್ಕೆ ತಿಳಿಸಬೇಕಾಗಿದೆ.

ಉತ್ತಮವಾದ ಶಿಕ್ಷಣ ಹಾಗೂ ಬೋಧನಾ ಕ್ರಮಗಳಿಂದ ಭಾರತದ ಯುವ ಜನರಲ್ಲಿ ಉತ್ಸಾಹ ತುಂಬಿ, ಹಲವು ಬಲಿದಾನಗಳಿಂದ ದೊರೆತ ನಮ್ಮ ಈ ಅಮೂಲ್ಯವಾದ ಸ್ವಾತಂತ್ರ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳುವತ್ತ ಹೆಜ್ಜೆಯಿಟ್ಟು, ಉತ್ಸಾಹದಿಂದ ಕೆಲಸ ಮಾಡಿ ಭಾರತವನ್ನು ಉನ್ನತ ಸ್ಥಿತಿಯತ್ತ ಕೊಂಡೊಯ್ಯುವಲ್ಲಿ ಶ್ರಮಿಸಬೇಕಾಗಿದೆ.

ಸ್ವಾತಂತ್ರ್ಯ ಎಂದರೆ ಜವಾಬ್ದಾರಿತನ ಎಂಬ ವಿಷಯವನ್ನು ಅರಿತು, ತಾನೊಬ್ಬ ಜವಾಬ್ದಾರಿಯುತ ಪ್ರಜೆಯಾಗಿ, ನಿಸ್ವಾರ್ಥ ಸೇವಾ ಮನೋಭಾವದಿಂದ ಪ್ರಾಮಾಣಿಕವಾಗಿ ರಾಷ್ಟ್ರದ ಪ್ರತಿ ಕರ್ತವ್ಯ ನಿರ್ವಹಿಸಿದರೆ, ಭಾರತವು ಒಂದು ಬಲಿಷ್ಠ ರಾಷ್ಟ್ರವಾಗಿ ನಿರ್ಮಾಣವಾಗಲಿದೆ.

Prepp+ Subscription
Only (₹999) ₹249/year
500+ Exams | 1 Year Full Access | 50,000+ Mock tests | 10,000+ Pyp's
Unlock Your Success Today!
LIMITED TIME OFFER